ತಮಗನ್ನಿಸಿದ ಊಹೆ, ಕಲ್ಪನೆಗಳನ್ನು ಹರಿಬಿಟ್ಟರು. ಇವುಗಳೇನೇ ಇರಲಿ ಎಲ್ಲರ ದೃಷ್ಟಿಯಲ್ಲಿ ಸರಸೂ ಹೀರೋ ಆದಳು. ಜೊತೆಗೆ ಪ್ರಿಯಾ ಭಾಗ್ಯವಂತೆ. ತಾನು ಹೀರೋ ಹೀರೋ ಎನ್ನುವುದನ್ನು ಕೇಳಿಸಿಕೊಂಡು ತನ್ನಷ್ಟಕ್ಕೆ ಖುಷಿಪಡುತ್ತಿದ್ದವಳು ಹಾಗೆ ಹೇಳಿದವರ ಕಡೆ ನೋಡಿ ನಸು ನಗುತ್ತಿದ್ದಳು.

ಹೀಗೆ ಜನರು ಬಂದು ತಾನು ಮಾಡಿದ್ದನ್ನು ಹೊಗಳುತ್ತಿದ್ದುದರ ಹಿನ್ನೆಲೆಯಲ್ಲಿ ಮೊದಮೊದಲು ಅದೇನು ಯಾರಾದರೂ ಮಾಡುವಂಥದೇ, ಏನಂಥಾ ಸೀಮೆಗಿಲ್ಲದ್ದು ಎಂದು ಭಾವಿಸಿದ್ದ ಸರಸೂಗೆ ಕ್ರಮೇಣ ತಾನು ಈ ಕೆಲಸ ಮಾಡಿದ್ದು ಸಾಮಾನ್ಯವಲ್ಲ ಎನ್ನಿಸುವುದಕ್ಕೆ ಶುರುವಾಯಿತು. ಎಲ್ಲರೂ ಹೇಳುತ್ತಿರುವಂತೆ ತಾನು ಹೀರೋ ಎಂಬ ಭಾವನೆ ಇನ್ನಷ್ಟು ಮತ್ತಷ್ಟು ಸ್ಥಿರಗೊಳ್ಳುತ್ತಿದ್ದ ಹಾಗೆ ಕಿವಿ, ಕಣ್ಣು ಸೂಕ್ಷ್ಮವಾದವು. ಅದರಿಂದ ಖುಷಿಯಾಗತೊಡಗಿತು. ಮತ್ತು ಹಾಗೆ ಹೇಳಲಿ ಎನ್ನುವ ಅಪೇಕ್ಷೆಯೂ ಹೆಚ್ಚಾಯಿತು. ಕೊಂಚ ಸಂಕೋಚದಿಂದ ತುಂಬ ಚುಟುಕಾಗಿ ಮಾತನಾಡುತ್ತಿದ್ದವಳು ಕ್ರಮೇಣ ಹೆಚ್ಚು ಮಾತನಾಡುವುದಕ್ಕೆ ಆರಂಭಿಸಿದಳು.

ತಟ್ಟನೆ ಅವಳಿಗೆ ಬಾಲಾಜಿ ಬರುವ ದಿನವಿದು ಎಂದು ನೆನಪಾಯಿತು. ಅಲ್ಲೆಲ್ಲೋ ಇದ್ದ ನಾಗೇಂದ್ರನನ್ನು ಸನ್ನೆ ಮಾಡಿ ಕರೆದು, ಮೈಸೂರ್‌ಪಾಕ್ ಪೊಟ್ಟಣವನ್ನು ಜೋಪಾನವಾಗಿಡುವಂತೆ ಕಿವಿಯಲ್ಲಿ ಹೇಳಿದಳು.

ಮನೆಯಿಂದ ಕಾಫಿ ತಂದು ಲೋಟಕ್ಕೆ ಹಾಕಿ ಕೈಗೆ ಕೊಡುತ್ತ ಪಕ್ಕದ ಮನೆಯಾಕೆ ಹತ್ತಿರ ಬಂದು, ‘ಇವತ್ತೇನು ಅಡುಗೆಗಿಡುಗೆ ಹಚ್ಕೊಳ್ಳಬೇಡಿ, ರೆಸ್ಟ್ ತೊಗೊಳ್ಳಿ, ಅಷ್ಟೆ... ಶಾರದಮ್ಮಂಗೂ ಹೇಳಿದೀನಿ’ ಎಂದು ಭುಜ ಸವರಿ ಹೊರಟರು. ‘ಅದೆಲ್ಲ ಯಾಕೆ’ ಎಂದವಳು ಹೇಳಿದ್ದನ್ನು ಅವರು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಬಂದವರೆಲ್ಲ ತಮಗೆ ತೋರಿದ ರೀತಿಯಲ್ಲಿ ಮಾತು, ಸ್ಪರ್ಶ, ನೋಟಗಳಿಂದ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ ನಂತರ ಇನ್ನು ಅಲ್ಲಿ ತಮಗೇನು ಕೆಲಸ ಎನ್ನುವುದು ಅರಿವಿಗೆ ಬಂದು ಅವರಿಗೆ ಸುಮ್ಮನೆ ಸಮಯ ಕಳೆಯುವುದು ಭಾರವಾಗತೊಡಗಿತು. ಅವರ ತೊಂದರೆ ಸರಸೂಗೂ ತಿಳಿದು, ಅವರಿಂದ ಬೇರೆ ಕಡೆಗೆ ಮುಖ ಮಾಡುತ್ತಿದ್ದಂತೆ ಒಬ್ಬೊಬ್ಬರಾಗಿ ತಲೆಯಾಡಿಸಿ ಕೈಸನ್ನೆ ಮಾಡಿ ಹೊರಟರು.

ತಾನು ಮತ್ತು ನಾಗೇಂದ್ರ ಮಾತ್ರ ಉಳಿದಾಗ ಪ್ರಿಯಾಳನ್ನು ಈ ಮೊದಲೇ ಹೋಗಿ ನೋಡದಿದ್ದಕ್ಕೆ ಹಳಿದುಕೊಂಡಳು ಸರಸೂ.

‘ಪ್ರಿಯಾನ ನೋಡ್ಕೊಂಡು ಬರ್ತೀನಿ’ ಎಂದು ಎದ್ದವಳಿಗೆ ಬಲ ಹಿಮ್ಮಡಿಯಲ್ಲಿ ಗಾಯವಾಗಿ ಕೊಂಚ ರಕ್ತ ಬಂದದ್ದು ಕಾಣಿಸಿತು. ಅದನ್ನು ನಿರ್ಲಕ್ಷಿಸಿ ಹೊರಟು ಅವಳ ಮನೆಯ ಬಾಗಿಲಲ್ಲಿ ನಿಂತವಳಿಗೆ ವಿಶೇಷ ರೀತಿಯ ಸ್ವಾಗತ ದೊರಕಿತು. ಶಾರದಮ್ಮ ದಾಪುಗಾಲಿಟ್ಟು ಬಂದದ್ದು, ಕೈಚಾಚಿ, ‘ಬನ್ನಿ... ಬನ್ನಿ’ ಎಂದದ್ದು ಸರಸೂಗೆ ಎಂದಿನಂತೆ ಕಾಣದೆ ಕೊಂಚ ಅಸಹಜವೆನಿಸಿ ಮುಜುಗರವಾಯಿತು. ಮುಕ್ತವಾಗಿರಲು ಹಿಂಜರಿಕೆಯಾಯಿತು. ಆದರೂ ತೋರಿಸಿಕೊಳ್ಳದೆ ಪ್ರಿಯಾ ಮಲಗಿದಲ್ಲಿಗೆ ಹೋಗಿ ಎದುರು ಕುಳಿತಳು. ಏನು ಮಾತನಾಡಬೇಕೆಂದೇ ತೋಚಲಿಲ್ಲ. ‘ಕೆಟ್ಟ ಕಾಲ... ಹಾಗೇ ಕಳೀತಲ್ಲ ...’ ಎಂದಳು ತಡೆತಡೆದು. ಪ್ರಿಯಾ ನೇರವಾಗಿ ನೋಡದೆ ಕ್ಷಣ ಕಾಲ ಬಿಟ್ಟು ತೀರ ಮೆಲುದನಿಯಲ್ಲಿ ‘ಗ್ರೇಟ್‌ಫುಲ್ ಟು ಯು...’ ಎಂದೇನೋ ಹೇಳಲು ಹೋಗಿ ಸುಮ್ಮನಾದಳು. ಶಾರದಮ್ಮ ಸುಮ್ಮನೆ ನಿಂತಿದ್ದರು.

‘ನಿದ್ದೆ ಮಾಡು’ ಎಂದು ಹೇಳಿ ಎದ್ದಳು ಸರಸೂ.